ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.

SJJES
ಸ್ಥಾಪನೆ- 1962

# ವಿದ್ಯಾವರಣ

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/02/2026 : www.sjjes.ac.in : info@sjjes.ac.in : +91.8192.277698

## ಜನವರಿ 12, ಸ್ವಾಮಿ ವಿವೇಕಾನಂದರ 163ನೇ ಜನ್ಮದಿನಾಚರಣೆ.





ಭಾರತ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ವಜ್ಞಾನಿಗಳಲ್ಲಿ ಒಬ್ಬರಾದ ಸ್ವಾಮಿ ವಿವೇಕಾನಂದರು ನಿರ್ಭಯತೆ, ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ದೃಷ್ಟಿಯ ಸಂಕೇತವಾಗಿ ಅವರು ಪರಿಗಣಿತರಾಗಿದ್ದಾರೆ. ಸ್ವಾಮಿ ವಿವೇಕಾನಂದರ ಜನ್ಮದಿನವಾದ ಜನವರಿ 12ರಂದು ರಾಷ್ಟ್ರೀಯ ಯುವ ದಿನ ಎಂದು ಆಚರಿಸಲಾಗುತ್ತದೆ.

ಇವರ ಪೂರ್ವದ ಹೆಸರು ನರೇಂದ್ರನಾಥ ದತ್ತ. ಇವರು 1863 ಜನವರಿ 12ರಂದು ಕೊಲ್ಕತ್ತರಲ್ಲಿ ಜನಿಸಿದರು. ತಂದೆ ವಿಶ್ವನಾಥ ದತ್ತ ತಾಯಿ ಭುವನೇಶ್ವರಿ ದೇವಿ. ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಮೇಲೆ ವಿವೇಕಾನಂದ ಎಂಬ ಹೆಸರನ್ನು ಪಡೆದರು. ಈ ದಿನ ನಮ್ಮ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಮಕ್ಕಳಿಗೆ ವಿಷಯವನ್ನು ತಿಳಿಸಲಾಯಿತು.

## ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ದಾವಣಗೆರೆ.

ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತಾ ಪೂರ್ವ ತಯಾರಿ ಕಾರ್ಯಗಾರ. ದಿನಾಂಕ 21.01.2026 ರಂದು ನಮ್ಮ ಶಾಲೆಯಲ್ಲಿ ಶ್ರೀ ಗಣೇಶ್ ಶಣ್ಯೈ ರವರು ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಉತ್ತಮವಾದ ಸ್ಫೂರ್ತಿದಾಯಕ ಮಾತುಗಳನ್ನು ನೀಡಿದರು. ಫಲಿತಾಂಶ ಸುಧಾರಣೆಗೆ ಯಾವ ರೀತಿ ಓದಬೇಕು ಮತ್ತು ಅವರು ಜೀವನದಲ್ಲಿ ಹೇಗೆ ಮುಂದೆ ಬರಬೇಕು, ಜೊತೆಗೆ ಪರೀಕ್ಷೆಯಲ್ಲಿ ಯಾವ ರೀತಿಯಾಗಿ ಉತ್ತಮ ಅಂಕಗಳನ್ನು ಪಡೆಯಬೇಕು ಎಂದು ತಿಳಿಸಿದರು. ಜೊತೆಗೆ ನಮ್ಮ ಮಾತೃಭಾಷೆ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವುದರ ಬಗ್ಗೆ ಮಕ್ಕಳಿಗೆ ತಿಳಿಸಿದರು.

## ಜನವರಿ 23: ಪರಾಕ್ರಮ ದಿವಸ

ಜನವರಿ 23: ಪರಾಕ್ರಮ ದಿವಸಭಾರತದ ಸ್ವಾತಂತ್ರ್ಯ ಹೋರಾಟದ ಮಹಾನ್ ನಾಯಕ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನವನ್ನು "ಪರಾಕ್ರಮ ದಿವಸ" ಎಂದು ಆಚರಿಸಲಾಗುತ್ತದೆ. ಇಂದು ಅವರ 129ನೇ ಜನ್ಮದಿನವನ್ನು ಆಚರಿಸಲಾಗುತ್ತಿದೆ. ಅವರ ದೇಶಪ್ರೇಮ ಮತ್ತು ಶೌರ್ಯವನ್ನು ಗೌರವಿಸಲು ಭಾರತ ಸರ್ಕಾರವು ಈ ದಿನವನ್ನು ಘೋಷಿಸಿದೆ.

# ಸಂಕ್ರಾಂತಿ ಸಂಭ್ರಮ ಮತ್ತು ಗಾಳಿಪಟ ಸ್ಪರ್ಧೆ






ಜನವರಿ 14, ಸಂಕ್ರಾಂತಿ ಸಂಭ್ರಮ ಮತ್ತು ಗಾಳಿಪಟ ಸ್ಪರ್ಧೆ ಚಳಿಗಾಲದ ಇಬ್ಬನಿಯ ನಡುವೆ ಸೂರ್ಯನು ತನ್ನ ಪಥವನ್ನು ಬದಲಿಸಿ ಉತ್ತರದ ಕಡೆಗೆ ಚಲಿಸಲು ಆರಂಭಿಸುತ್ತಿದ್ದಂತೆ ಕರ್ನಾಟಕದಾದ್ಯಂತ ಸಂಕ್ರಾಂತಿಯ ಸಂಭ್ರಮದ ವಾತಾವರಣ ಮನೆ ಮಾಡುತ್ತದೆ. ಭಾರತದ ಇತರೆಡೆಗಳಲ್ಲಿ ಇದನ್ನು ಲೋಹಿರಿ ಅಥವಾ ಪೊಂಗಲ್ ಎಂದು ಕರೆದರೆ, ನಮ್ಮ ಕರ್ನಾಟಕದಲ್ಲಿ ಇದು ಮಕರ ಸಂಕ್ರಾಂತಿ ಅಥವಾ ರೈತರ ಹೆಮ್ಮೆಯ ಸುಗ್ಗಿ ಹಬ್ಬ. ಜನವರಿ 14ರಂದು ಆಚರಿಸಲಾದ ಈ ಹಬ್ಬವು ಕೇವಲ ಸಂಭ್ರಮದಿನವಲ್ಲ ಇದೊಂದು ವಿಜ್ಞಾನ ಮತ್ತು ಸಂಸ್ಕೃತಿಯ ಸಮ್ಮಿಲನ. ಇದು ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸುವ ನಿಖರವಾದ ಖಗೋಳ ಘಟನೆಯನ್ನು ಸೂಚಿಸುತ್ತದೆ. ಇದು ಆಧ್ಯಾತ್ಮಿಕ ಆಚರಣೆಗಳಿಗೆ ಮಂಗಳಕರವೆಂದು ಪರಿಗಣಿಸಲಾದ ತಿಂಗಳ ಅವಧಿಯಾದ ಉತ್ತರಾಯಣದ ಆರಂಭವನ್ನು ಸೂಚಿಸುತ್ತದೆ. ಈ ದಿನದಂದು ನಮ್ಮ ಶಾಲೆಯಲ್ಲಿ ಸುಗ್ಗಿ ಸಂಭ್ರಮದ ವಾತಾವರಣ ಕಲ್ಪಿಸಿ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಯಿತು. ಇದೇ ದಿನದಂದು 8,9&10ನೇ ತರಗತಿಯ ವಿದ್ಯಾರ್ಥಿಗಳಿಗೆ ಗಾಳಿಪಟ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. 10ನೇ ತರಗತಿಯ ವಿದ್ಯಾರ್ಥಿಗಳಿಗೆ ದತ್ತು ಗುಂಪುಗಳ ಪ್ರಕಾರ ವಿದ್ಯಾರ್ಥಿಗಳು ಗಾಳಿಪಟವನ್ನು ಬಾನೆತ್ತರಕ್ಕೆ ಹಾರಿಸಿದರು. ಅದರ ಮೂಲಕ ಗುರಿ ಸಾಧನೆಗಳು ಯಶಸ್ವಿಯಾಗಲೆಂದು ಪ್ರಯತ್ನಿಸಿದರು.

## ಚಿತ್ರಕಲಾ ಸ್ಪರ್ಧೆ

ಜನವರಿ 15 ರಂದು ಡಾ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ ಇವರಿಂದ ಹಮ್ಮಿಕೊಳ್ಳಲಾದ ಶ್ರೀ ಸದ್ಯೋಜಾತ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದ ಅಂಗವಾಗಿ ನಡೆದ ರಂಗೋಲಿ ಹಾಗೂ ಚಿತ್ರಕಲಾ ಸ್ಪರ್ಧೆಗಳಲ್ಲಿ ಎಸ್ ಜೆ ಜೆ ಎಂ ಪ್ರೌಢಶಾಲೆಯ ವಿದ್ಯಾರ್ಥಿನಿ ವೇದ ಜಿ ಪಿ ಇವಳು ಚಿತ್ರಕಲಾ ವಿಭಾಗದಲ್ಲಿ ಪ್ರಥಮ ಬಹುಮಾನ ಹಾಗೂ ರಂಗೋಲಿ ವಿಭಾಗದಲ್ಲಿ ದ್ವಿತೀಯ ಬಹುಮಾನ ಪಡೆದಿದ್ದಾಳೆ. ಅದೇ ರೀತಿ 8ನೇ ತರಗತಿಯ ವಿದ್ಯಾರ್ಥಿನಿ ನಿಕಿತಾ ಕೆ ಎಂ ಇವಳು ರಂಗೋಲಿ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದಿದ್ದಾಳೆ.

## ಗಣರಾಜ್ಯೋತ್ಸವದ ಪ್ರಯುಕ್ತ – ಅಂತರ್ ಶಾಲಾ ಸ್ಪರ್ಧೆ





ಎಸ್ ಜೆ ಜೆ ಎಂ ಪ್ರೌಢಶಾಲೆಯಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಕೂಡ ಅಂತರ್ ಶಾಲಾ ಸ್ಪರ್ಧೆಯನ್ನು ಏರ್ಪಡಿಸಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಲಾಯಿತು. ಈ ಒಂದು ಸ್ಪರ್ಧೆಯಲ್ಲಿ 7 ಹಿರಿಯ ಪ್ರಾಥಮಿಕ ಶಾಲೆಗಳು ಭಾಗವಹಿಸಿದ್ದವು. ವಿವಿಧ ಸ್ಪರ್ಧೆಗಳನ್ನು ಮಕ್ಕಳಿಗೆ ಏರ್ಪಡಿಸಲಾಗಿತ್ತು. ಅದರಲ್ಲಿ 100 ಮೀಟರ್ ಓಟದ ಸ್ಪರ್ಧೆ, ಜ್ಞಾಪಕ ಶಕ್ತಿ ಸ್ಪರ್ಧೆ, ಚಿತ್ರಕಲೆ, ಜನಪದ ಗೀತೆ, ದೇಶಭಕ್ತಿ ಗೀತೆಯ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಮಕ್ಕಳು ಉತ್ತಮವಾದ ರೀತಿಯಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದುಕೊಂಡರು. ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗಳೆಂದರೆ 1.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಡಿಯಾರ ಕಂಬ. 2.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದುಗ್ಗಮ್ಮನಪೇಟೆ. 3.ಜಿ ವಿ ಸಿ ಹಿರಿಯ ಪ್ರಾಥಮಿಕ ಶಾಲೆ. 4.ಎಸ್‌ವಿಎಂಸಿ ಹಿರಿಯ ಪ್ರಾಥಮಿಕ ಶಾಲೆ. 5.ಜೀಜಾಮಾತಾ ಹಿರಿಯ ಪ್ರಾಥಮಿಕ ಶಾಲೆ. 6.ಮುರುಗರಾಜೇಂದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. 7.ಯಲ್ಲಮ್ಮ ದೇವಿ ಹಿರಿಯ ಪ್ರಾಥಮಿಕ ಶಾಲೆ. ಈ ಎಲ್ಲ ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಜನವರಿ 26:ಗಣರಾಜ್ಯೋತ್ಸವ






ಗಣರಾಜ್ಯೋತ್ಸವವು ಅಧಿಕಾರವು ಯಾವುದೇ ಒಬ್ಬ ವ್ಯಕ್ತಿ, ರಾಜ ಅಥವಾ ಸರ್ಕಾರಕ್ಕೆ ಸೇರಿದ್ದಲ್ಲ, ಬದಲಾಗಿ ಸಂವಿಧಾನ ಮತ್ತು ಜನರಿಗೆ ಸೇರಿದ್ದು ಎಂಬುದನ್ನು ನಮಗೆ ನೆನಪಿಸುತ್ತದೆ. ಈ ದಿನವು ನಮ್ಮ ಹಕ್ಕುಗಳನ್ನು ಆಚರಿಸುವ ಜೊತೆಗೆ ನಮ್ಮ ಕರ್ತವ್ಯಗಳನ್ನು ಸಹ ನೆನಪಿಸುತ್ತದೆ. ಜನವರಿ 26, 1950 ರಂದು ಭಾರತವು ಸಂವಿಧಾನವನ್ನು ಅಂಗೀಕರಿಸಿತು ಮತ್ತು ತನ್ನನ್ನು ತಾನು ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಘೋಷಿಸಿಕೊಂಡಿತು. ಡಾ.ರಾಜೇಂದ್ರ ಪ್ರಸಾದ್ ಅವರು ಭಾರತದ ಮೊದಲ ರಾಷ್ಟ್ರಪತಿಯಾದರು. ಶಾಲಾ ಕಾರ್ಯಕ್ರಮದ ವರದಿ -ಈ ದಿನ ನಮ್ಮ ಶಾಲೆಯಲ್ಲಿ ಬೆಳಿಗ್ಗೆ 8:15ಕ್ಕೆ ಸರಿಯಾಗಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ನಂತರ ಮಕ್ಕಳಿಂದ ಪಥಸಂಚಲನ ಪ್ರಾರಂಭವಾಗಿ, ಧ್ವಜಗೀತೆ ಮತ್ತು ರಾಷ್ಟ್ರಗೀತೆಯೊಂದಿಗೆ ಪಥಸಂಚಲನ ನಡೆಯಿತು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ನಾಗರಾಜ್ ಎಸ್. (ಮುಖ್ಯೋಪಾಧ್ಯಾಯರು) ವಹಿಸಿದ್ದರು ಮತ್ತು ಶ್ರೀಮತಿ ಶೈಲಜಾ ಎಸ್. ಎನ್. (ಮುಖ್ಯೋಪಾಧ್ಯಾಯಿನಿ) ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳಿಂದ ಭಾಷಣ ಹಾಗೂ ದೇಶಭಕ್ತಿ ಗೀತೆಗಳು ನಡೆದವು. ಪ್ರಾಥಮಿಕ ಶಾಲೆಯ ಪರವಾಗಿ ಶ್ರೀಯುತ ರುದ್ರೇಶ್‌ಮೂರ್ತಿ ಕೆ. ಪಿ. ಅವರು ಶಿಕ್ಷಕರ ನುಡಿಗಳನ್ನು ಆಡಿದರು. ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜ್ ಎಸ್. ಅವರು ಅಧ್ಯಕ್ಷೀಯ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಲಿಂಗರಾಜ್ ಸರ್ ಅವರು ಸ್ವಾಗತ ಕೋರಿದರು ಮತ್ತು ಭಾಗ್ಯಲಕ್ಷ್ಮಿ ಅವರು ವಂದನಾರ್ಪಣೆ ಮಾಡಿದರು.

ವಿಶೇಷವಾಗಿ 9ನೇ ತರಗತಿಯ ವಿದ್ಯಾರ್ಥಿನಿಯರು ಶ್ರೀಮತಿ ಶ್ವೇತ,ಹೆಚ್ ಇವರ ಮಾರ್ಗದರ್ಶದಲ್ಲಿ ಎಲ್ಲಾ ಶಿಕ್ಷಕರಿಗೂ ಗಣರಾಜ್ಯೋತ್ಸವದ ಬ್ಯಾಡ್ಜ್‌ಗಳನ್ನು ತಯಾರಿಸಿ ನೀಡಿದರು.

## ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಗುರುಬಸಮ್ಮ ವಿ. ಚಿಗಟೇರಿ ಆಂಗ್ಲಮಾಧ್ಯಮ ಪ್ರೌಢಶಾಲೆ




ದಿನಾಂಕ: 06 ಮತ್ತು 07 ಫೆಬ್ರವರಿ ತಿಂಗಳಿನ 2026ರಂದು ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕಾರಟಗಿಯಲ್ಲಿ ನಡೆದಿದ್ದು, ಈ ಪ್ರತಿಭಾ ಕಾರಂಜಿಯಲ್ಲಿ ನಮ್ಮ ಶಾಲೆಯ ಕುಮಾರಿ ಧನುಶ್ರೀ 10ನೇ ತರಗತಿ ಇವರು ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ನಮ್ಮ ಶಾಲೆಯ ಹೆಮ್ಮೆಯೇ ಸರಿ. ಸದರಿ ರಾಜ್ಯ ಮಟ್ಟದ ರಂಗೋಲಿ ಸ್ಪರ್ಧೆಯಲ್ಲಿ 35 ಸ್ಪರ್ಧಿಗಳಲ್ಲಿ 29 ಸ್ಪರ್ಧಿಗಳು ಭಾಗವಹಿಸಿದ್ದರು. ನಮ್ಮ ಶಾಲೆಯ ಧನುಶ್ರೀ ಜಿಲ್ಲಾಮಟ್ಟದಲ್ಲಿ ಪ್ರಥಮ ಬಹುಮಾನ ಪಡೆಯುವ ಮೂಲಕ ನಮ್ಮ ಜಿಲ್ಲೆಯನ್ನು ಪ್ರತಿನಿಧಿಸಿದ್ದು ವಿಶೇಷವೇ ಸರಿ. ಈ ವಿದ್ಯಾರ್ಥಿಗೆ ಶಾಲಾ ಆಡಳಿತ ಮಂಡಳಿಯವರು, ಶೈಕ್ಷಣಿಕ ಸಲಹೆಗಾರರು, ಶಾಲಾ ಮುಖ್ಯಸ್ಥರು, ಶಿಕ್ಷಕರು ಅಭಿನಂದನೆ ತಿಳಿಸಿದ್ದಾರೆ.

## ಸಂಕ್ರಾಂತಿ ಹಬ್ಬ :



ವರ್ಷದ ಮೊದಲ ಹಬ್ಬವೇ " ಮಕರ ಸಂಕ್ರಾಂತಿ " ಹಾಗಾಗಿ ಈ ಹಬ್ಬವನ್ನು ಭಾರತದ ಎಲ್ಲಾ ಭಾಗದಲ್ಲಿಯೂ ಅತ್ಯಂತ ಸಂಭ್ರಮವಾಗಿ ಆಚರಿಸುತ್ತಾರೆ . ಇದು ಸೂರ್ಯ ದೇವರ ಹಬ್ಬವೆಂದು ಹೇಳುತ್ತಾರೆ .ಉತ್ತಮ ಬೆಳೆಗಳ ಇಳುವರಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಲು ರೈತರು ಈ ಹಬ್ಬವನ್ನು ಆಚರಿಸುತ್ತಾರೆ .

* ಮಕರ ಸಂಕ್ರಾಂತಿ ಪ್ರತಿ ವರ್ಷ ಜನವರಿ ತಿಂಗಳಲ್ಲಿ ಇಡೀ ಭಾರತದ ರಾಜ್ಯಗಳಲ್ಲಿ ಆಚರಿಸುತ್ತಾರೆ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಆಚರಿಸುತ್ತಾರೆ .ಈ ಹಬ್ಬವನ್ನು ಮನ ಮನೆಗಳಲ್ಲಿ ಸುಖ ಸಂಪತ್ತಿನ ರೂಪದಲ್ಲಿ ಯುಗ ಯುಗಗಳಿಂದಲೂ ಆಚರಿಸುತ್ತ ಬಂದಿದ್ದಾರೆ . ಈ ದಿನದಿಂದ ಉತ್ತರಾಯಣ ಪುಣ್ಯ ಕಾಲ ಪ್ರಾರಂಭವಾಗುತ್ತದೆ . ಸೂರ್ಯ ಮಕರ ರಾಶಿಯಲ್ಲಿ ಪ್ರವೇಶ ಮಾಡುತ್ತಾನೆ . ಒಂದು ವಿಶೇಷವೇನೆಂದರೆ ಉತ್ತರಾಯಣ ಪುಣ್ಯ ಕಾಲದಲ್ಲಿ ಮರಣ ಹೊಂದಿದ ವ್ಯಕ್ತಿ ಹುಟ್ಟು ಸಾವಿನಿಂದ ಮುಕ್ತಿ ಹೊಂದುತ್ತಾನೆ .
* ಮಹಾ ಭಾರತದ ಪಿತಾಮಹಾ ಭೀಷ್ಮಾಚಾರ್ಯರು ಕುರುಕ್ಷೇತ್ರ ಯುದ್ಧದಲ್ಲಿ ಗಾಯಗೊಂಡಿದ್ದರು ಸಹ ಈ ದಿನವನ್ನು ಕಾಯುತ್ತಿದ್ದರು. ಸೂರ್ಯ ಮಕರ ರಾಶಿಯಲ್ಲಿ ಪ್ರವೇಶ ಮಾಡಿದಾಗ ಭೀಷ್ಮಾಚಾರ್ಯರು ತಮ್ಮ ಕೊನೆ ಉಸಿರೆಳೆದರು .
* ಹಳ್ಳಿಗಳಲ್ಲಿ ಜಗಳವಾಡಿ ಮಾತು ಬಿಟ್ಟವರನ್ನು ಒಂದುಗೂಡಿಸಿ ಅವರಿಗೆ ಎಳ್ಳು -ಬೆಲ್ಲ ತಿನ್ನಿಸುವುದರ ಮೂಲಕ ಒಳ್ಳೆಯದನ್ನು ಮಾತಾಡೋಣ ಎಂದು ಹೇಳಿ ರಾಜಿ ಮಾಡಿಸುತ್ತಿದ್ದರು . ಮನೇಲಿ ಚಿಕ್ಕ ಮಕ್ಕಳಿಗೆ ಹಸೆಯಲ್ಲಿ ಕೂರಿಸಿ ಎಳ್ಳು ಬೆಲ್ಲ ಎಲಚಿಗಳನ್ನು ಸುರಿದು ಸಿಹಿ ತಿನ್ನಿಸುತ್ತಾರೆ .
* ಈ ಹಾಗೆ ಈ ಹಬ್ಬದಲ್ಲಿ ದನಕರುಗಳಿಗೆ ಮೈ ತೊಳಿಸಿ ಬಣ್ಣ ಬಳೆದು ಅಲಂಕಾರ ಮಾಡಿ ಮೆರವಣಿಗೆ ಮಾಡುತ್ತಾರೆ . ರಾತ್ರಿ ಸಮಯದಲ್ಲಿ ದನಕರುಗಳಿಗೆ ಕಿಚ್ಚು ಹಾಯಿಸುವುದರ ಮೂಲಕ ಸಂಭ್ರಮಿಸುತ್ತಾರೆ

ಹೀಗೆ ನಾಡಿನ ಜನರು ಮತ್ತು ರೈತಾಪಿ ವರ್ಗದವರು ಈ ರೀತಿಯಾಗಿ ಸಂಕ್ರಾಂತಿ ಹಬ್ಬ ಆಚರಿಸುತ್ತಾರೆ..

**ಶಿಲ್ಪ ಎ ಸಾಲಿಮಠ ಶಿಕ್ಷಕರು**

**ಜಿ.ವಿ.ಸಿ.ಹೆಚ್.ಪಿ.ಎಸ್. ( ಆ.ಮಾ.)**

# ನರಸರಾಜ ಕ್ಯಾಂಪಸ್‌ನಲ್ಲಿ — ಗಣರಾಜ್ಯೋತ್ಸವದ ಸಂಭ್ರಮ



ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲೆಯಲ್ಲಿ ಜನವರಿ 26ರಂದು ಭಾರತದ 76ನೇ ಗಣರಾಜ್ಯೋತ್ಸವವನ್ನು ಸಂಭ್ರಮ ಮತ್ತು ಶಿಸ್ತಿನಿಂದ ಆಚರಿಸಲಾಯಿತು.ಕಾರ್ಯಕ್ರಮದ ಆರಂಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರು ರಾಷ್ಟ್ರಧ್ವಜವನ್ನು ಹಾರಿಸಿ ವಂದನೆ ಸಲ್ಲಿಸಿದರು. ನಂತರ ವಿದ್ಯಾರ್ಥಿನಿಯರಿಂದ ರಾಷ್ಟ್ರಗೀತೆ , ದೇಶಭಕ್ತಿಗೀತೆಗಳನ್ನು ಹಾಡಿಸಲಾಯಿ. ಈ ಕಾರ್ಯಕ್ರಮದಲ್ಲಿ ನರಸರಾಜ ಕ್ಯಾಂಪಾಸ್ ನ ಎಲ್ಲಾ ಶಿಕ್ಷಕರು, ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿನಿಯರು ಹಾಜರಿದ್ದು ದೇಶಭಕ್ತಿಯ ಭಾವನೆ ವ್ಯಕ್ತಪಡಿಸಿದರು.

ಮುಖ್ಯ ಶಿಕ್ಷಕರು ಮಾತನಾಡಿ, ಭಾರತದ ಸಂವಿಧಾನದ ಮಹತ್ವ, ನಾಗರಿಕರ ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು ವಿದ್ಯಾರ್ಥಿನಿಯರಿಗೆ ತಿಳಿಸಿದರು ಹಾಗೂ ಸಂವಿಧಾನದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಲಾಯಿತು.ವಿದ್ಯಾರ್ಥಿನಿಯರು ದೇಶಭಕ್ತಿಗೀತೆಗಳು,ಹಾಗೂ ಭಾಷಣ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ದೇಶದ ಏಕತೆ ಮತ್ತು ಅಖಂಡತೆಯನ್ನು ಕಾಪಾಡುವ ಪ್ರತಿಜ್ಞೆ ಕೈಗೊಳ್ಳಲಾಯಿತು.ಈ ಮೂಲಕ ಗಣರಾಜ್ಯೋತ್ಸವ ಕಾರ್ಯಕ್ರಮವು ಶಿಸ್ತು, ಉತ್ಸಾಹ ಮತ್ತು ದೇಶಭಕ್ತಿಯ ವಾತಾವರಣದಲ್ಲಿ ಯಶಸ್ವಿಯಾಗಿ ನೆರವೇರಿತು.

## ಅಭಿನಂದನೆಗಳು



ಶ್ರೀ ವೀರಭದ್ರಪ್ಪ.ಎಂ.ಚಿಗಟೇರಿ ನರ್ಸರಿ/ಹಿರಿಯ ಪ್ರಾಥಮಿಕ ಶಾಲೆ, ಹಾಗೂ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ ಯಲ್ಲಿ ವಿದ್ಯಾಭ್ಯಾಸ ಮಾಡಿದ ಸೋಮೇಶ್ವರ ಎಸ್ ಶೆಟ್ಟರ್ ವಿದ್ಯಾರ್ಥಿಯು ಎನ್.ಎನ್.ಸಿ. ಯಲ್ಲಿ ವಿಶೇಷ ರಾಷ್ಟ್ರೀಯ ಐಕ್ಯತಾ ಶಿಬಿರ (RDC SNIC) ದೆಹಲಿಯಲ್ಲಿ ಈ ಶಿಬಿರಕ್ಕೆ ದಾವಣಗೆರೆಯಿಂದ ಆಯ್ಕೆಯಾಗಿ ದೆಹಲಿಯಲ್ಲಿ ಜನವರಿ 26 ರಂದು ನೆಡೆದ ಗಣರಾಜ್ಯೋತ್ಸವದ ಪೇರೆಡ್‌ನ ಸಾಂಸ್ಕೃತಿಕ ವಿಭಾಗದಲ್ಲಿ ಭಾಗವಹಿಸಿದ್ದನು ಈ ನಮ್ಮ ಸಂಸ್ಥೆಯ ಹಿರಿಯ ವಿದ್ಯಾರ್ಥಿಗೆ ನಮ್ಮ ಸಂಸ್ಥೆ, ಆಡಳಿತ ಮಂಡಳಿ, ಪರವಾಗಿ, ಮುಖ್ಯೋಪಾಧ್ಯಾಯರುಗಳು, ಶಿಕ್ಷಕರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ನೀರು ಜೀವನಾಧಾರ



ನೀರು ಜಗತ್ತಿನ ಜನರ ಜೀವನಾಡಿ , ನೀರಿರದಿದ್ದರೆ ಜಗತ್ತಿನಲ್ಲಿ ಯಾವ ಜೀವರಾಶಿಯು ಬದುಕುಳಿಯುತ್ತಿರಲಿಲ್ಲ ನಿರು ನಮಗೆ ಅತ್ಯಮೂಲ್ಯ ಎಂಬುದಷ್ಟೆ ಅಲ್ಲ ಅದು ಒಂದು ಔಷಧಿ ಎಂಬುದನ್ನು ನಾವು ಅರಿಯಬೇಕಿದೆ. ಮೊದಲೆಲ್ಲ ನೀರು ನಮಗೆ ಉಚಿತವಾಗಿ ಸಿಗುತ್ತಿತ್ತು ಅದರೆ ನಾವುಗಳು ಇಂದು ಹಣತೆತ್ತು ಕುಡಿಯಬೇಕಿದೆ. ಹಾಗಾದರೆ ಯಾವ ಸಮಯದಲ್ಲಿ ನೀರು ಕುಡಿಯುವುದು ಉಚಿತ ? ಇದರ ಬಗ್ಗೆ ನಮ್ಮ ಭಾರತೀಯ ಪುರಾಣಗಳಲ್ಲಿ ಏನು ಹೇಳಲಾಗಿದೆ ? ಎಂಬುದನ್ನು ಅರಿಯೋಣ

**ಅಜೀರ್ಣೇ ಭೇಷಜಂ ವಾರಿ ಜೀರ್ಣೇ ವಾರಿ ಬಲಪ್ರದಮ್ ।**

**ಭೋಜನೇ ಚಾಮೃತಂ ವಾರಿ ಭೋಜನಾಂತೇ ವಿಷಪ್ರದಮ್ ॥**
(ಗರುಡ ಪುರಾಣ, ಪೂರ್ವಖಂಡ, ಅಧ್ಯಾಯ 113, ಶ್ಲೋಕ 1)

**ಶ್ಲೋಕದ ಅರ್ಥ**

ಅಜೀರ್ಣವಾದಾಗ ನೀರು ಔಷಧಿಯಂತೆ ಕೆಲಸ ಮಾಡುತ್ತದೆ. ಆಹಾರವು ಸಂಪೂರ್ಣವಾಗಿ ಜೀರ್ಣವಾದ ನಂತರ ಕುಡಿಯುವ ನೀರು ದೇಹಕ್ಕೆ ಶಕ್ತಿಯನ್ನು ನೀಡುತ್ತದೆ. ಊಟ ಮಾಡುವಾಗ ಮಧ್ಯದಲ್ಲಿ ಸ್ವಲ್ಪ ನೀರು ಕುಡಿಯುವುದು ಅಮೃತಕ್ಕೆ ಸಮಾನ. ಆದರೆ, ಊಟ ಮುಗಿದ ತಕ್ಷಣ ನೀರು ಕುಡಿಯುವುದು ವಿಷಕ್ಕೆ ಸಮಾನವಾಗಿರುತ್ತದೆ. ಎಂದು ಹೇಳಲಾಗಿದೆ

ಶ್ಲೋಕದ ಪೂರ್ಣ ಅರ್ಥ ಮತ್ತು ಸಂದೇಶ ಎಂದರೆ
ಈ ಶ್ಲೋಕವು 'ನೀರು ಕುಡಿಯುವ ವಿಜ್ಞಾನ'ವನ್ನು ನಾಲ್ಕು ಹಂತಗಳಲ್ಲಿ ವಿವರಿಸುತ್ತದೆ:

1. **ಅಜೀರ್ಣೇ ಭೇಷಜಂ:** ಹೊಟ್ಟೆ ಭಾರವಾಗಿದ್ದಾಗ ಅಥವಾ ತಿಂದಿದ್ದು ಜೀರ್ಣವಾಗದಿದ್ದಾಗ, ಊಟ ಮಾಡಬಾರದು. ಆಗ ಕೇವಲ ಬಿಸಿ ನೀರನ್ನು ಕುಡಿಯಬೇಕು. ಇದು ಹೊಟ್ಟೆಯಲ್ಲಿರುವ ಕಲ್ಮಶವನ್ನು ತೊಳೆದು, ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಇಲ್ಲಿ ನೀರೇ ಔಷಧಿ.
2. **ಜೀರ್ಣೇ ಬಲಪ್ರದಮ್**: ಊಟ ಮಾಡಿ ಸುಮಾರು 2–3 ಗಂಟೆಗಳ ನಂತರ (ಆಹಾರ ಜೀರ್ಣವಾದ ಮೇಲೆ) ನೀರು ಕುಡಿಯಬೇಕು. ಇದು ದೇಹದ ರಕ್ತ ಸೇರಿದಂತೆ ಸಪ್ತಧಾತುಗಳನ್ನು ಪೋಷಿಸಿ, ದೇಹಕ್ಕೆ ಬಲ ಮತ್ತು ಚೈತನ್ಯವನ್ನು ಕೊಡುತ್ತದೆ.

3. **ಭೋಜನೇ ಅಮೃತಮ್**: ಊಟ ಮಾಡುವಾಗ ಗಂಟಲು ಒಣಗದಿರಲು ಅಥವಾ ಆಹಾರವನ್ನು ರುಬ್ಬಲು ಸಹಾಯವಾಗುವಂತೆ ಮಧ್ಯೆ ಮಧ್ಯೆ ಸ್ವಲ್ಪ ನೀರು (ಸಿಪ್ ಮಾಡುತ್ತಾ) ಕುಡಿಯುವುದು ಅಮೃತದಂತೆ ಒಳ್ಳೆಯದು. ಇದು ಆಹಾರವನ್ನು ಹದಗೊಳಿಸಿ ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ.

4. **ಭೋಜನಾಂತೇ ವಿಷಪ್ರದಮ್**: ಊಟವಾದ ತಕ್ಷಣ ಲೋಟಗಟ್ಟಲೆ ನೀರು ಕುಡಿಯಬಾರದು. ಊಟದ ನಂತರ ಜಠರಾಗ್ನಿ (ಆುಂಜಿಣುತಜ ಈುಡಿಜ) ಪ್ರಜ್ವಲಿಸಿ ಆಹಾರವನ್ನು ಪಚನ ಮಾಡುತ್ತಿರುತ್ತದೆ. ತಕ್ಷಣ ನೀರು ಕುಡಿದರೆ ಆ ಬೆಂಕಿ ಆರಿಹೋಗುತ್ತದೆ. ಆಗ ಆಹಾರವು ಜೀರ್ಣವಾಗದೆ ಕೊಳೆಯುತ್ತದೆ (Toxic). ಇದು ಸ್ಥೂಲಕಾಯ ಮತ್ತು ಗ್ಯಾಸ್ಟ್ರಿಕ್ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಇದು ವಿಷಕ್ಕೆ ಸಮಾನ.

ಪ್ರಮುಖ ತಾತ್ಪರ್ಯ
ಈ ಶ್ಲೋಕವು 'ಆರೋಗ್ಯ ಸೂತ್ರ'ವನ್ನು ಬೋಧಿಸುತ್ತದೆ:

• ಸಮಯ ಪ್ರಜ್ಞೆ: ನೀರು ಕೇವಲ ದಾಹ ತೀರಿಸುವುದಲ್ಲ, ಅದು ಯಾವಾಗ ಕುಡಿಯುತ್ತೇವೆ ಎನ್ನುವುದರ ಮೇಲೆ ನಮ್ಮ ಆರೋಗ್ಯ ನಿರ್ಧಾರವಾಗುತ್ತದೆ.

• ಊಟದ ನಂತರ ಬೇಡ: ಊಟವಾದ ತಕ್ಷಣ ನೀರು ಕುಡಿಯುವುದನ್ನು ವರ್ಜಿಸಬೇಕು (ಕನಿಷ್ಠ 45 ನಿಮಿಷದಿಂದ 1 ಗಂಟೆಯ ನಂತರ ಕುಡಿಯುವುದು ಉತ್ತಮ).

• ಆಯುರ್ವೇದದ ಸಾರ: ಅಗ್ನಿ (ಜೀರ್ಣಶಕ್ತಿ)ಯನ್ನು ಕಾಪಾಡಿಕೊಳ್ಳುವುದೇ ಆರೋಗ್ಯದ ಗುಟ್ಟು

ಈ ಅಂಶಗಳನ್ನು ನಾವು ಸರಿಯಾಗಿ ಪಾಲಿಸಿದರೆ ನಮ್ಮ ದಿನನಿತ್ಯದ ಆರೋಗ್ಯ ಕಾಡಿಕೊಳ್ಳುವಲ್ಲಿ ಯಶಸ್ಸನ್ನು ಸಾಧಿಸಬಹುದು.

**ರುದ್ರೇಶಮೂರ್ತಿ.ಕೆ.ಪಿ**
ಸಹ ಶಿಕ್ಷಕರು
ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ನರ್ಸರಿ / ಹಿರಿಯ ಪ್ರಾಥಮಿಕ ಶಾಲೆ
ವಿನೋಬನಗರ ದಾವಣಗೆ

## ಶ್ರೀ ವೀರಭದ್ರಪ್ಪ.ಎಂ.ಚಿಗಟೇರಿ ನರ್ಸರಿ/ಹಿರಿಯ ಪ್ರಾಥಮಿಕ ಶಾಲೆಯ ವತಿಯಿಂದ ಬೆಂಕಿರಹಿತ ಅಡುಗೆ ಹಾಗೂ ಸತ್ವಯುಕ್ತ ಆಹಾರ ಎಂಬ ವಿಷಯದ ಪ್ರಾತ್ಯಕ್ಷಿತೆ







## ಡಾ. ಜಿ ಎಸ್ ಶಿವರುದ್ರಪ್ಪ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮ






ಅನ್ವೇಷಕರು ಆರ್ಟ್ಸ್ ಫೌಂಡೇಶನ್, ರಂಗ ವೇದಿಕೆ ಹಾಗೂ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ಇವರುಗಳ ಸಂಯುಕ್ತಾಶ್ರಯದಲ್ಲಿ ಡಾ. ಜಿ ಎಸ್ ಶಿವರುದ್ರಪ್ಪ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ವಿನೋಬನಗರದ ಶ್ರೀಮತಿ ಸುರೇಖ ವೀರಣ್ಣ ಕಲಾಮಂದಿರದಲ್ಲಿ ದಿನಾಂಕ 8/2/2026 ರಂದು ನಾಟಕ ಪ್ರದರ್ಶನದವಿದ್ದವು ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಕಾರ್ಯದರ್ಶಿಯಾದ ಮನೋಹರ್ ಎಸ್ ಚಿಗಟೇರಿಯವರು ನಾಟಕಗಳು ಮಕ್ಕಳಲ್ಲಿ ಓದುವ ಕಲೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ವನ್ನು ಹೆಚ್ಚಿಸುಕೊಳ್ಳಲು ಸಹಕಾರಿಯಾಗಿರುತ್ತದೆ. ಸಾಂಸ್ಕೃತಿಕ ಪ್ರತಿಭೆಯ ಅನಾವರಣಕ್ಕೆ ನಮ್ಮ ಸಂಸ್ಥೆ ಸದಾ ಪ್ರೋತ್ಸಾಹವನ್ನು ನೀಡುತ್ತದೆ ಎಂದು ಹೇಳಿದರು ನಂತರ ಶಂಭುಲಿಂಗಪ್ಪ ಕೊಟ್ಟೂರು ಇವರ ರಚನೆ ಮತ್ತು ನಿರ್ದೇಶನದಲ್ಲಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ವಿದ್ಯಾರ್ಥಿಗಳು 'ಹಾಡುಹಕ್ಕಿ' ಹಾಗೂ ಕುವೆಂಪು ರಚನೆಯ ರುದ್ರೇಶಮೂರ್ತಿ.ಕೆ.ಪಿ ನಿರ್ದೇಶನದಲ್ಲಿ 'ನನ್ನ ಗೋಪಾಲ' ನಾಟಕವನ್ನು ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಪ್ರದರ್ಶಿಸಿದರು ಕಾರ್ಯಕ್ರಮದಲ್ಲಿ ಅನ್ವೇಷಕರು ಆರ್ಟ್ಸ್ ಫೌಂಡೇಶನ್ನ ಸಿದ್ದರಾಜು ಎಸ್ ಎಸ್ , ಉಮಾಶಂಕರ್ ಉಪಸ್ಥಿತರಿದ್ದರು.

# ಶಿವಣ್ಣ ಚಿಗಟೇರಿ ನರ್ಸರಿ ಮಕ್ಕಳ ಚಟುವಟಿಕೆಗಳ ಚಿತ್ರಪಟಗಳು















